**AKSHARASURYA**
Peer-Reviewed, Multi Lingual E-Journal
Volume – 01, Issue – 02, November 2022.

# ವಚನಸಾಹಿತ್ಯ

**ಲೇಖನ ಬರಹಗಾರರು**
**ಪ್ರೊ. ವಿಶ್ವನಾಥ**
ಕನ್ನಡ ಅಧ್ಯಯನ ಪೀಠ
ಜೆ.ಎನ್.ಯು. ನವದೆಹಲಿ – 67.
9449489894
vish8460@gmail.com

12ನೇ ಶತಮಾನದ ದೇವರದಾಸಿಮಯ್ಯ ಶಿವಶರಣ ಆದ್ಯವಚನಕಾರ. ಶಂಕರದಾಸಿಮಯ್ಯನ ಸಮಕಾಲೀನ, ಸುರಪುರ ತಾ. ಮುದನೂರು ಇವನ ಜನ್ಮಸ್ಥಳ, ಶಿವಭಕ್ತಿ ಸತಿ–ಪತಿಗಳೊಂದಾದ ಭಕ್ತಿ ಹಿತವಪ್ಪುದುಶಿವಗೆ ಎಂದವನು. ನೇಯ್ಗೆ ಈತನ ಕಾಯಕ. ದಾಸಿಮಯ್ಯನ ಅತೀವಭಕ್ತಿಗೆ ಮೆಚ್ಚಿದ ಶಿವನು ಜಂಗಮರೂಪದಲ್ಲಿ ಬಂದು ಅವನು ನೆಯ್ದ ವಸ್ತ್ರವನ್ನು ಕಾಣಿಕೆ ರೂಪದಲ್ಲಿ ಆತನಿಗೆ ತವನಿಧಿಯಾಗಿ ಕೊಟ್ಟನೆಂಬ ಮಾತಿದೆ. ಬಸವಣ್ಣನವರು ಈತನ, ಆದರ್ಶದಾಂಪತ್ಯ ಕುರುತು ಹೊಗಳಿದ್ದಾರೆ. ಭಕ್ತಿ ಎಂತಹುದಯ್ಯಾ ಎಂದಿದ್ದಾರೆ. ಈತ, ತನ್ನ ಸಮಕಾಲೀನರಾದ ಡೋಹರಕಕ್ಕಯ್ಯ, ಮಾದರಚೆನ್ನಯ್ಯ, ಕುಂಬಾರಗುಂಡಯ್ಯಾ, ಕೆಂಬಾವಿಬೋಗಣ್ಣ ಮುಂತಾದ ವಚನಕಾರರನ್ನು ಸ್ಮರಿಸಿದ್ದಾನೆ.

ಅಯ್ಯಪ್ಪನದೇವಾಂಗಪುರಾಣ, ವಿರೂಪಾಕ್ಷದೇಸಿಕನ ದೇವರದಾಸಿಮಯ್ಯಪುರಾಣಗಳಲ್ಲಿ ದೇವರದಾಸಿಮಯ್ಯನ ಪ್ರಸ್ತಾಪವಿದೆ. ಈತ ಕೆಲವು ಪವಾಡಗಳನ್ನು ಮಾಡಿದ್ದಾನೆ. ಪೊಟ್ಟಲಕೆರೆಯಲ್ಲಿ ಜೈನರನ್ನು ವಾದದಲ್ಲಿ ಸೋಲಿಸುತ್ತಾನೆ. ರಾಣಿಸುಗ್ಗವೆಗೆ ಶಿವದೀಕ್ಷೆ ಕೊಡುತ್ತಾನೆ. ಘಟಸರ್ಪವನ್ನು ಶಿವಲಿಂಗಮಾಡಿ ಪೊಟ್ಟಲಕೆರೆಯಲ್ಲಿ ಪ್ರತಿಷ್ಠಾಪಿಸುತ್ತಾನೆ. ಈತನ ಸು. 142 ವಚನಗಳು ದೊರೆತಿವೆ. ವಚನಗಳಲ್ಲಿ ಭಕ್ತಿಯ ಮೇಲೆ ತತ್ವದ ವಿವರಗಳಿವೆ. ಅರ್ಥ, ಭಾವ, ಧ್ವನಿ, ಧರ್ಮ, ಮಾನವತೆ ಈತನ ವಚನಗಳ ಸಾರ. ಭಕ್ತಿ, ಸಮರ್ಪಣಭಾವಗಳಿವೆ. ಭಾಷೆ ಸರಳವಾದ್ದು ಭಾವದಲ್ಲಿ ಅರ್ಥಶ್ರೀಮಂತಿಕೆ ಇದೆ.

1. ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ ಗೋರಿಗೊಳಿಸಿ ಕುರಿಯ ಕೊರಳನೆ ಕೊಯ್ದಂಬ ಕ್ರೂರ ಕರ್ಮಿಗಳನವರ ಶಿವಭಕ್ತರೆನಬಹುದೆ.
2. ಈತನ ಶರಣರು ದೇಸಿಯಹೋದೆಡೆ ಮಿಸಲೋಗರವ ಹೊರಗಿರಿಸಿದೊಡೆ ಹಂದಿಯೂಸಿ ನೋಡಿದಂತೆ.
3. ಸತಿಯರಸಂಗವನು ಅತಿಶಯದದಾಸ್ಯವನ್ನು ಪೃಥ್ವಿಗೀಶ್ವರನಪೂಜೆಯನು ಅರಿವುಳ್ಳರೆ ಹೆರರ ಕೈಯಿಂದ ಮಾಡಿಸುವರೆ, ಎಂಬಲ್ಲಿ ಸಮಾಜದ ವಿಮರ್ಶೆ ಇದೆ.

ಹಸಿವಿಲ್ಲದ ಬೊಂಬೆಗೆ ತೃಷೆಯಿಲ್ಲದ ನೀರೆರೆದು, ಎಣ್ಣೆ ಇದ್ದು ಎಳ್ಳನೆನೆಯದ ಭೇದವ, ಪರವಿದ್ದೂ ಪ್ರಾಣವ ಪ್ರಕೃತಿ ಅರಿಯದ ಭೇದವಕಿಚ್ಚಿದ್ದೂ ಕಲ್ಲುಸಿಡಿಯದ ಭೇದವ, ಕಾಯವಿದ್ದು ಕನ್ಯೆಯನ್ನನುಭವಿಸದ ಭೇದವ, ಎಂಬಲ್ಲಿ ಬೆಡಗಿನ ವಚನದ ಅರ್ಥವಿದೆ.

ಎಳ್ಳು ಇಲ್ಲದ ಗಾಣದಲ್ಲಿ ಎಣ್ಣೆಯುಂಟೆ, ಜಳ್ಳು ತೂರಿದರೆ ಭತ್ತವುಂಟೆ
ಹಂದಿ ಶ್ರೀಗಂಧ ಸೂಸಿದರೆ ಗಂಧರಾಜ ನಾಗಬಲ್ಲುದೆ,

ಹರಿದ ಗೋಣಿಯಲ್ಲೊಬ್ಬ ಕಳವೆಯ ತುಂಬಿದ್ದ,
ಕಳೆವೆಹೋಗಿ ಬರಿಗೋಣಿ ಉಳಿದಿತ್ತು
ಇರುಳೆಲ್ಲನೆಡೆದಾನ ಸುಂಕಕಂಜಿ
ಅಳಿಮನದವನ ಭಕ್ತಿ ಇಂಥಾಯ್ತು ಕಾಣಾ ರಾಮನಾಥ.

"ಅತಿಆಸೆ ಗತಿಗೇಡು" ಎಂಬ ಗಾದೆ ಮಾತಿದೆ. ಅಜ್ಞಾನದಿಂದ ಅನಾಹುತವಾಗುತ್ತದೆ. ಹರಿದ ಗೋಣಿಚೀಲ ಭತ್ತತುಂಬಿ ಸುಂಕಕ್ಕೆ ಅಣಜಿದಂತೆ, ಇತ್ತ ಬತ್ತವು ಇಲ್ಲದಂತೆ ಮಾನವರ ಸ್ಥಿತಿಯಾಗುತ್ತದೆ.

ಬರುಶಟಗನ ಭಕ್ತಿ ದಿಟವೆಂದು ನಚ್ಚಲುಬೇಡ,
ಮಠದೊಳಗಣಬೆಕ್ಕು ಇಲಿಯಂ ಕಂಡು,
ಪುಟನೆಗೆದಂತಾಯ್ತು ಕಾಣ ರಾಮನಾಥ

ಕಪಟಭಕ್ತಗೆ ವಚನಕಾರರಲ್ಲಿ ಗೌರವವಿಲ್ಲ. ಪವಿತ್ರವಾದ ಮಠದಲ್ಲಿದ್ದರು ಬೆಕ್ಕು ಇಲಿಯನ್ನು ಕಂಡು, ಹಸಿವು ನೀಗಿಸಿಕೊಳ್ಳುತ್ತದೆ. ಕಪಟಭಕ್ತಿ, ಮಠದ ಬೆಕ್ಕಿನಂತೆ, ಧಾರ್ಮಿಕ ಕೇಂದ್ರಗಳಲ್ಲಿ ಅಧಾರ್ಮಿಕ ಚಟುವಟಿಕೆಗಳು ನಡೆಯಬಾರದು.

ಕಡೆಗೀಲಿಲ್ಲದ ಬಂಡಿ ಹೊಡಗೆಡಹುದೆ ಮಾಂಬುದೆ,
ಕಡೆಗೀಲು ಬಂಡಿಧಾರ.
ಕಡುದರ್ಪವೇರಿದ ಒಡಲೆಂಬ ಬಂಡಿಗೆ,
ಕಡೆಗೀಲು ಕಾಣ ರಾಮನಾಥ.

ಅಹಂಕಾರ ನಿಷಿದ್ಧ. ಸ್ವನಿಯಂತ್ರಣಬೇಕು. ಕತ್ತೆ ಬಲ್ಲುದೇ ಕತ್ತುರಿಯ ಪರಿಮಳವ ಎಂಬ ನಾಣ್ನುಡು ಅವರದು ಕಡೆಗೀಲು ಬದುಕಿನ ಮಹತ್ತರ ನಡೆಗೆ, ಬಂಡಿಗೆ ಆಧಾರ ಅದಿಲ್ಲದೆ ಬಂಡಿ ಮುಂದು ನಡೆಯದು.

ಜ್ವರವಿಡಿರ ಬಾಯಿಗೆ ನೊರೆವಾಲು ಒಲಿವುದೆ ಮುಂತಾದ ವಚನಗಳಲ್ಲಿ ಆಡುನುಡಿಯ ಸೊಗಸಿದೆ. ಅಣ್ಣಬಸವಣ್ಣ, ಅಲ್ಲಮಾ, ಅಕ್ಕ, ಸರ್ವಜ್ಞನ ಮೇಲೆ ಈತನ ವಚನಗಳ ಪ್ರಭಾವಬೀರಿದೆ. ಭಾವ, ಅನುಭಾವಗಳು ಪ್ರಭಾವಿಸಿವೆ. ಈತ ವಚನಗಳ ಆದ್ಯಪ್ರವರ್ತಕ, ಶ್ರೇಷ್ಠ ವಚನರಚನಕಾರ. ಜನತೆಯ ಸರಳಸೂತ್ರವಾದ ಅರಿವೆ, ಅನ್ನ, ಮನೆಯ ಪರಿಕಲ್ಪನೆಗೆ ಇಂಬಾದವನು. (ಕೃಪೆ: ಕವಿವಿ ಕೋ. ಪು. 777–778) ಈ ಪ್ರಕೃತಿ ದೈವದ್ದು. ಜಂಗಮದ್ದು.

ಎತ್ತು ನಿಮ್ಮದಾನ ಜೀವ ನಿಮ್ಮದಾನ
ಕಾಯ ಜೀವ ಉಳ್ಳಲ್ಲಿಯೇ ನಿಮ್ಮಪೂಜಿಸದ
ನಾಯಿಗಳನೇನೆಂಬೆ ಹೇಳ ರಾಮನಾಥ.

ಸರ್ವಸೃಷ್ಟಿಯು ಜಂಗಮದಿಂದ, ಪಂಚಭೂತಗಳ ಪ್ರಕೃತಿಯಿಂದ.
ಇಳೆ ನಿಮ್ಮದಾನ, ಬೆಳೆನಿಮ್ಮದಾನ,
ಸುಳಿದು ಸೂಸುವ ವಾಯು ನಿಮ್ಮದಾನ ನಿಮ್ಮ
ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ಹೇಳ ರಾಮನಾಥ.

AKSHARASURYA
Peer-Reviewed, Multi Lingual E-Journal
Volume – 01, Issue – 02, November 2022.

ಕಣ್ಣುಮಿಸಲು ಶಿವನ ಕೈ ಮೀಸಲು ಶಿವನ, ಕಾಲುಮೀಸಲು
ನಾಲಗೆ ಮೀಸಲು ಶಿವನ, ಕಿವಿ ಮೀಸಲು ಶಿವನ,
ನಾಸಿಕ ಮೀಸಲು ಶಿವನ, ತನು ಮೀಸಲು ಮನವೆಲ್ಲ
ಮೀಸಲು ಶಿವನ ಈ ಮೀಸಲು ಬೀಸರವೋಗದಂತಿರೆ
ಆತನೆ ಜಗದೀಶ ಕಾಣಾ ರಾಮನಾಥ.

ಶ್ರೀ ಬಸವಣ್ಣನವರ ದೇವಾಲಯದ ಪರಿಕಲ್ಪನೆ ಈ ಪದ್ಯದಲ್ಲಿದೆ. ನಮ್ಮ ಅಂಗಾಂಗ ಎಲ್ಲವು ಶಿವನಿಗೆ, ದೈವಕ್ಕೆ ಮೀಸಲು. ತನು, ಮನ ನಮ್ಮ ನಮ್ಮ ಅಂಕೆಯಲ್ಲಿರಬೇಕು ಎಂಬುದು ವಚನಕಾರರ ಸಾರ.

ಹರ ತನ್ನ ಭಕ್ತರ ತಿರಿವಂತೆ ಮಾಡುವ
ಒರೆದು ನೋಡುವ ಸುವರ್ಣದ ಚಿನ್ನದಂತೆ,
ಅರೆದು ನೋಡುವ ಚಂದನದಂತೆ,
ಜಗಿದು ನೋಡುವ ಕಬ್ಬಿನ ಕೋಲಿನಂತೆ,
ಬೆದರದೆ ಬೆಚ್ಚದೆ ಇದ್ದಡೆ,
ಕರವಿಡಿದೆತ್ತಿಕೊಂಬ ನಮ್ಮ ರಾಮನಾಥ.

ಪ್ರಕೃತಿ ಉಳಿಯಬೇಕು. ಜಂಗಮ ವಿಸ್ತರಿಸಬೇಕು. ಭಕ್ತರನ್ನು ಪರೀಕ್ಷಿಸುವವನುದೈವ. ಮಾನವರ ಸೃಷ್ಟಿ ಅವರ ದೇಹ ರಚನೆ ಜಂಗಮದಿಂದಲೆ ಆಗಿದೆ.

ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದೆಡೆ ವಿಷವೇರಿತ್ತಯ್ಯ ಆಪಾರಮಸ್ತಕಕೆ
ಹಸಿವಿಗನ್ನವನ್ನಿಕ್ಕಿ ವಿಷವನ್ನು ಇಳುಹಬಲ್ಲಡೆ
ವಸುಧೆಯೊಳಗಾತನೇ ಗಾರುಡಿಗ ಕಾಣಾರಾಮನಾಥ.

ಅನ್ನವೇ ಪರಮಸತ್ಯ. ಹಸಿವಿನ ನೀಗುವಿಕೆ ಆಹಾರದಿಂದ. ಅದು ಭೌತಿಕ, ಜೈವಿಕ ರೂಪದಲ್ಲಿರಬೇಕು.

ಒಡಲುಗೊಂಡವ ಹುಸಿವ,
ಒಡಲುಗೊಂಡವನೆಂದು ನೀನೆನ್ನ
ಜಡಿದೊಮ್ಮೆನುಡಿಯದಿರಾ
ನಿನ್ನನೆಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ.

ಮಾನವರ ವ್ಯಕ್ತಿತ್ವ, ನಡೆನುಡಿಯಲ್ಲಿ ಹಸಿವು ನೀಗಿ, ಹುಸಿತೊಲಗಬೇಕು. ಹುಸಿತನಕ್ಕೆ ಗೌರವಾದರಗಳಿಲ್ಲ.

ಒರತೆಗಳ ಕಂಡಿತು ಕೆಲರುಬಾವಿಯ ತೋಡೆಂಬರು,
ಅರವಟಿಗೆ ಛತ್ರವು ತಮ್ಮದೆಂಬರು,
ಪಯಿರೈದದಿರೆ, ಸುರಿದ ಮಳೆ ಸುರಿಸದಿದ್ದರೆ,
ಅವರೇತರಲ್ಲಿ ನೀಡುವರಯ್ಯಾ ರಾಮನಾಥ

AKSHARASURYA
Peer-Reviewed, Multi Lingual E-Journal
Volume – 01, Issue – 02, November 2022.

ಪ್ರಕೃತಿ ಮಳೆ ಸುರಿಸದೇ ಮನುಜರು ಮಾಡುವುದಾದರೂ ಏನು? ಯಾರು ಮೇಲಲ್ಲ. ಕೀಳಲ್ಲ, ಹಯನು ನೀಡುವಹಾಲು ಅಮೃತಕ್ಕೆ ಸಮಾ. ಡೋಹರ, ಮಾರರ, ಕೆಂಬಾವಿ, ಉದ್ದಟಯ್ಯ, ಇವರೆಲ್ಲ ಕಾಯಕ ಜೀವಗಳು. ಮನುಜರು, ಆರೋಗ್ಯಕರ ಶ್ರಮಿಕರು, ಸಹಬಾಳ್ವೆಯ ಮನುಜರು.

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪದು ಶಿವಂಗೆ,
ಸತಿಪತಿಗಳೊಂದಾಗದವನ ಭಕ್ತಿ,
ಅಮೃತದೊಳು ವಿಷಬೆರೆತಂತೆ ಕಾಣರಾಮನಾಥ.

ಮಾನವತೆ, ಪ್ರೀತಿ, ಕರುಣೆ ಇವು ಮನುಕುಲದ ಮೌಲ್ಯಗಳು. ಸಮಾಜದಲ್ಲಿ ಎಲ್ಲರೂ ಪರಸ್ಪರ ಅನೋನ್ಯವಾಗಿ ಬೆರೆತು ಬದುಕಬೇಕು. ಅಶಾಂತಿ, ಅನೆಮ್ಮದಿಯಿಂದಲ್ಲ. ಪ್ರೀತಿಯ ಅಮೃತದ ಸೇಂಚನವಾಗಬೇಕು. ಅಶಾಂತಿಯ ವಿಷವಾಗಬಾರದು. ಜಗತ್ತಿನ ಒಳಿತನ್ನು ಸಮಾಜದ ಅಭಿವೃದ್ಧಿಯನ್ನು ವಚನಕಾರರು ಬಯಸಿದ್ದಾರೆ. ಆರ್ಥಿಕ ಸಂಪನ್ಮೂಲದ ಪಥಿಕರು 12ನೇ ಶತಮಾನದ ವಚನಕಾರರು. ಅವರಲ್ಲಿ ದೇವರದಾಸಿಮಯ್ಯರು ಮುಖ್ಯರು, ಕಪಡ, ಖಾನ ಮಕಾನ್ ಪರಿಕಲ್ಪನೆ ನೀಡಿದ ಮಹಾನ್ ಚಿಂತಕರು ವಚನಕಾರರು. ಜಗತ್ತನ್ನೇ ಒಂದು ಮಹಾಮನೆ, ಆಲಯವಾಗಿ ಕಂಡವರು. ಕಾಯಕ ನಿಷ್ಠೆಯ ವಚನ ತಪಸ್ವಿಗಳು.

ಕಂಚು–ಮುಟ್ಟು–ಕಲ್ಲು–ಗುಂಡುಗಳೆರೆವಣ್ಣಗಳು ನೀವು ಕೇಳಿರೆ
ಗಂಟೆಯ ನುಡಿಸಿ ಶಿವನುಂಟು ಮಾಡಿಕೊಂಡೆನೆಂದಿರಿ
ಆ ಗಂಟೆಯ ಧ್ವನಿಗೆ ಒಂದು ಗೋಟಡಕೆಯ ಸೋಲ ಗುರು ರಾಮನಾಥ.

ಮಾನವತೆಯ ಸಾಕಾರಮೂರ್ತಿ ದೇವರ ದಾಸಿಮಯ್ಯ ಮತ್ತು ಆತನ ವಚನಗಳು, Very language of men ನಿಂದ ರಚಿತವಾದವು. ಜನಭಾಷೆಯೇ ಕನ್ನಡದಲ್ಲಿ ವಚನಸಾಹಿತ್ಯ ಎಂಬ ರೂಪದಲ್ಲಿ ಬಹುಎತ್ತರಿಕೆ ಬೆಳೆಯಿತು, ಮಾನವತೆ ಬೆಳೆಸಿತು.

ಮೊಲೆ ಮೂಡಿಬಂದರೆ ಹೆಣ್ಣೆಂಬರು,
ಗಡ್ಡ ಮಿಸೆ ಬಂದರೆ ಗಂಡೆಂಬರು,
ನಡುವೆ ಸುಳಿವಾತ್ಮನು ಗಂಡುಅಲ್ಲ ಹೆಣ್ಣುಅಲ್ಲ ಕಾಣಾರಾಮನಾಥ.

ವಚನಕಾರರ ರಚನೆ ಕನ್ನಡ ಸಾಹಿತ್ಯದ ಶ್ರೀಮಂತ ಚಿನ್ನದ ಬೆಳಸು, ಲಿಂಗಸಮಾನತೆ ಪ್ರತಿಪಾದನೆ 12ನೇ ಶತಮಾನದಲ್ಲಿಯೇ ಆರಂಭವಾಯಿತು. ಡಾ. ಸಿ. ವೀರಣ್ಣ ಅವರು ದಾಸಿಮಯ್ಯನವರನ್ನು ಕುರಿತು ಹೀಗೆ ಅಭಿಪ್ರಾಯಿಸಿದ್ದಾರೆ. "ಸ್ತ್ರೀಯರಿಗೆ ಗೌರವದ ವಿಚಾರವು ಕೂಡ ದಾಸಿಮಯ್ಯನ ವಚನಗಳಲ್ಲಿ ಪ್ರಸ್ತಾಪಿತವಾಗಿದೆ. ಕೆಳವರ್ಗದವರಾದ ಕಾಯಕ ಜೀವಿಗಳಮನೆಯಲ್ಲಿ ಸ್ತ್ರೀಯರೂ ದುಡಿಮೆಯಲ್ಲಿ ಸಮವಾಗಿ ಪಾಲ್ಗೊಳ್ಳುತ್ತಿದ್ದರು. ಈಗಲೂ ಪಾಲ್ಗೊಳ್ಳುತ್ತಾರೆ. ದಾಸಿಮಯ್ಯನಿಗೆ ಮೇಲಿನವರಲ್ಲಿದ್ದ ಮಡಿವಂತಿಕೆ ದಂಗುಬಡಿಸಿದೆ. ವಚನಕಾರರಚಳುವಳಿಯ ಬೆನ್ನಲುಬು ಕಾಯಕ ಜೀವಿಗಳು.

ಅಂಬಿಗರಚೌಡಯ್ಯ, ಮಡಿವಾಳಮಾಚಯ್ಯ ಜೇಡರದಾಸಿಮಯ್ಯ, ಮೇದರಕೇತಯ್ಯ ನುಲಿಯಚಂದಯ್ಯ, ಹಡಪದಅಪ್ಪಣ್ಣ, ಮೊಳಿಗೆ ಮಾರಯ್ಯ, ಕೊಟ್ಟಣದರೆಮ್ಮವ್ವ ತುರುಗಾಹಿರಾಮಣ್ಣ ಇವರೇ ಮೊದಲಾದ ವೃತ್ತಿಜೀವಿಗಳೇ ಸಾಕ್ಷಿ." (ಹನ್ನೆರಡನೇಶತಮಾನದ ಕಾಯಕಜೀವಿಗಳಚಳವಳಿ, ಪು. 27. ನಾಲ್ಕನೇ ಮುದ್ರಣ. 2017). ವಚನಸಾಹಿತ್ಯ ಕಾಯಕದ ಮೂಲಕ ಜನಭಾಷೆಯಲ್ಲಿ ಸಾಹಿತ್ಯ ಸೃಷ್ಟಿಸಿತು. ಅದು ಜನತೆಯ ನುಡಿಯ ಮಾತಾಗಿದ್ದಿತು. ಜನರಮಾತೇ ಸಾಹಿತ್ಯವಾಹಿನಿಯಾಗಿ ಹರಿದು, ಜನಮಾನಸದಲ್ಲಿ ಸೇರಿತು.

**ಪರಾಮರ್ಶನ ಗ್ರಂಥಗಳು:**

1. ಡಾ.ಎಚ್. ತಿಪ್ಪೇರುದ್ರಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ–2018.
2. ಮರುಳಸಿದ್ದಪ್ಪ, ಕಿ.ರಂ. ನಾಗರಾಜ: ವಚನಕಮ್ಮಟ –2017,
3. ಹಾ. ಮಾ. ನಾ. (ಸಂ) ಕರ್ನಾಟಕ ವಿಷಯ ವಿಶ್ವಕೋಶ– 1979.
4. ವಚನ ಸಂಪುಟಗಳು, ಕರ್ನಾಟಕ ಸರ್ಕಾರ ಬೆಂಗಳೂರು